**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ ಇವರು ಮುಜರಾಯಿ ಇಲಾಖೆಗೆ ಸೇರಿರುವ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯಕ್ಕೆ ಸೇರಿದ ಲಕ್ಷಾಂತರ ರೂಪಾಯಿ ವರ್ಷಾಸನ ಹಣವನ್ನು ನಿಯಮಬಾಹಿರವಾಗಿ ಅರ್ಚಕರಲ್ಲದವರಿಗೆ ಪಾವತಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟು ಮಾಡಿರುವ ಅಧಿಕಾರಿ/ ಸಿಬ್ಬಂದಿಗಳಿಂದ ಹಣ ವಸೂಲಾತಿ ಮಾಡುವುದು ಹಾಗೂ ಸದರಿ ದೇಗುಲಕ್ಕೆ ಸೇರಿದ ಸ್ಥಿರಾಸ್ತಿ ಮತ್ತು ಚರಾಸ್ತಿಯನ್ನು ದೇವಾಲಯದ ವಶಕ್ಕೆ ಪಡೆದು ಸಂರಕ್ಷಿಸುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆದಿರುತ್ತಾರೆ.**

**ಉತ್ತರ :-**

ಧಾರ್ಮಿಕ ದತ್ತಿ ಇಲಾಖೆಗೆ ಸೇರಿರುವ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯದ ಅರ್ಚಕರಲ್ಲದವರಿಗೆ 2003-04ನೇ ಸಾಲಿನಿಂದ 2020ನೇ ಸಾಲಿನವರೆಗೆ ಸುಮಾರು ರೂ.78,798/-ಗಳನ್ನು ಪದ್ಮನಾಭ ಎಂಬುವವರಿಗೆ ಮತ್ತು 2021ನೇ ಸಾಲಿನಿಂದ 2024ನೇ ಸಾಲಿನವರೆಗೆ ಸುಮಾರು ರೂ.93,000/-ಗಳನ್ನು ರಾಮಚಂದ್ರ ಎಂಬುವವರಿಗೆ ವರ್ಷಾಸನ ಹಣವನ್ನು ಪಾವತಿ ಮಾಡಲಾಗಿರುತ್ತದೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯಕ್ಕೆ ಸಂಬಂಧಿಸಿದಂತೆ, ಮೂಲ ಅರ್ಚಕರಲ್ಲದವರಿಗೆ ವರ್ಷಾಸನ ಹಣವನ್ನು ಕೆಲವು ವರ್ಷಗಳಿಂದ ಪಾವತಿಸುತ್ತಿರುವುದರಲ್ಲಿ ಅಧಿಕಾರಿ/ಸಿಬ್ಬಂದಿಗಳ ಪಾತ್ರ ಇರುವ ಬಗ್ಗೆ ಹಾಗೂ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರನ್ನು ಕೋರಲಾಗಿ, ಈ ಕುರಿತು ಸೂಕ್ತ ಪ್ರಸ್ತಾವನೆ/ ದೋಷಾರೋಪಣ ಪಟ್ಟಿಯೊಂದಿಗೆ ಪ್ರಸ್ತಾವನೆ ಪಡೆದು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ವರದಿ ಮಾಡಿರುತ್ತಾರೆ.

ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯವು ಕಿರಂಗೂರು ಗ್ರಾಮಠಾಣಾಗೆ ಸೇರಿದ ಅಸೆಸ್ ಮೆಂಟ್ ನಂ.385ರಲ್ಲಿ ಇರುತ್ತದೆ. ಕಿರಂಗೂರು ಗ್ರಾಮದ ಸರ್ವೆ ನಂ.649ರಲ್ಲಿ 0.07 ಗುಂಟೆ, ಸರ್ವೆ ನಂ.653ರಲ್ಲಿ 0.01 ಗುಂಟೆ ಸರ್ವೆನಂ. ಮತ್ತು ಸರ್ವೆ ನಂ.1088ರಲ್ಲಿ 0.28 ಗುಂಟೆ ಜಮೀನು ದೇವಾಲಯದ ಹೆಸರಿನಲ್ಲಿ ಇರುತ್ತವೆ.

ಸದರಿ ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯವನ್ನು ಧಾರ್ಮಿಕ ದತ್ತಿ ಇಲಾಖೆಗೆ ಸೇರಿಸಿ ಹೊರಡಿಸಲಾದ ಸರ್ಕಾರದ ಅಧಿಸೂಚನೆಯನ್ನು ಪ್ರಶ್ನಿಸಿ, ಮಹದೇವು ಬಿನ್ ಲೇ.ಈರೇಗೌಡ ಎಂಬುವವರು ಶ್ರೀರಂಗಪಟ್ಟಣದ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲದಲ್ಲಿ OS ನಂ. 287/2021ರಂತೆ ಪ್ರಕರಣ ದಾಖಲು ಮಾಡಿದ್ದು, ನಂತರ ಇದೇ ವಿಚಾರವಾಗಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ WP No.19530/2021 (GM-R/C) ಮತ್ತು 332/2022 ರೀತ್ಯ ಪ್ರಕರಣ ದಾಖಲಾಗಿತ್ತು. ಸದರಿ ಪ್ರಕರಣದಲ್ಲಿ ದಿನಾಂಕ:01/12/2021ರಿಂದ ತಡೆಯಾಜ್ಞೆ ಸಹ ಇತ್ತು. ತದನಂತರದಲ್ಲಿ ಪ್ರಕರಣದ ವಿಚಾರಣೆ ನಡೆದು ದಾವೆದಾರರು ತಮ್ಮ ಕ್ಲೇಮುಗಳನ್ನು ಸಮರ್ಥಿಸಿಕೊಳ್ಳಲು ವಿಫಲರಾಗಿ ಪ್ರಕರಣವನ್ನು ಆದೇಶಕ್ಕೆ ಕಾಯ್ದಿರಿಸಿದ ಸಮಯದಲ್ಲಿ ದಾವೆಯನ್ನು ಹಿಂಪಡೆಯುವ ಮನವಿ ಸಲ್ಲಿಸಿದ್ದು, ಪ್ರಸ್ತುತ ಪ್ರಕರಣವನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ. ಈ ಮೇರೆಗೆ ಸದರಿ ದೇವಾಲಯದ ವಿಚಾರವಾಗಿ ಇದ್ದ ತಡೆಯಾಜ್ಞೆಯೂ ಸಹ ವಜಾಗೊಂಡಿರುತ್ತದೆ.

ಸರ್ಕಾರದ ಅಧಿಸೂಚನೆಯಂತೆ ಪ್ರಸ್ತಾಪಿತ ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯದಲ್ಲಿದ್ದ ಅನಧಿಕೃತ ವ್ಯಕ್ತಿಗಳನ್ನು ಹೊರಹಾಕಿ ದೇವಾಲಯವನ್ನು ಕಾರ್ಯನಿರ್ವಾಹಕ ಅಧಿಕಾರಿ, ಶ್ರೀರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣರವರ ಆಡಳಿತ ಸುಪರ್ದಿಗೆ ವಹಿಸಲಾಗಿರುತ್ತದೆ. ಆದರೆ, ಶ್ರೀರಂಗಪಟ್ಟಣದ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲದಲ್ಲಿ ದಾಖಲಾಗಿರುವ ಮೂಲ ದಾವೆ OS ನಂ. 287/2021ರಲ್ಲಿ ವಿಚಾರಣೆ ಮುಂದುವರಿದಿರುತ್ತದೆ. ಮುಂದಿನ ವಿಚಾರಣೆ ದಿನಾಂಕ:17/01/2026ಕ್ಕೆ ನಿಗದಿಯಾಗಿರುತ್ತದೆ.

ಶ್ರೀರಾಮ ದೇವಾಲಯಕ್ಕೆ ಸೇರಿದ ಕಿರಂಗೂರು ಗ್ರಾಮದ ಸರ್ವೆ ನಂ.649ರಲ್ಲಿ 0.07 ಗುಂಟೆ, ಸರ್ವೆ ನಂ.653ರಲ್ಲಿ 0.01 ಗುಂಟೆ ಸರ್ವೆನಂ. ಮತ್ತು ಸರ್ವೆ ನಂ. 1088ರಲ್ಲಿ 0.28 ಗುಂಟೆ ಜಮೀನುಗಳ ವಿಚಾರದಲ್ಲಿ ಮಹದೇವು ಬಿನ್ ಲೇ.ಈರೇಗೌಡ ಎಂಬುವವರು ಶ್ರೀರಂಗಪಟ್ಟಣದ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲದಲ್ಲಿ OS ನಂ. 16/2021ರಂತೆ ಪ್ರಕರಣದ ದಾಖಲು ಮಾಡಿದ್ದು, ಜಮೀನಗಳ ಸ್ವಾಧೀನ ವಿಚಾರವಾಗಿ ತಡೆಯಾಜ್ಞೆ ಇದ್ದು, ಮುಂದಿನ ವಿಚಾರಣೆ ದಿನಾಂಕ:17/02/2026ಕ್ಕೆ ನಿಗದಿಯಾಗಿರುತ್ತದೆ.

ಮಾನ್ಯ ನ್ಯಾಯಾಲಯದಲ್ಲಿ ದೇವಾಲಯದ ಪರವಾಗಿ ಪ್ರಕರಣ ಇತ್ಯರ್ಥಗೊಳಿಸುವ ಸಂಬಂಧ ಅಗತ್ಯ ದಾಖಲೆಗಳು ಮತ್ತು ಮಾಹಿತಿಯನ್ನು ಸಲ್ಲಿಸಲಾಗಿದ್ದು, ನ್ಯಾಯಾಲಯದ ಮುಂದಿನ ಆದೇಶದಂತೆ ಪ್ರಸ್ತಾಪಿತ ಕಿರಂಗೂರು ಗ್ರಾಮದ ಶ್ರೀರಾಮ ದೇವಾಲಯದ ಆಸ್ತಿಗಳನ್ನು ಸಂರಕ್ಷಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತದೆ.

ಸಂಖ್ಯೆ.ಕಂಇ 237 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು